Mr. SPEAKER.—He says that if he wants to know what part is imported from foreign countries for this purpose, the Deputy Minister has already replied, but if he wants to know what is being manufactured in a certain factory, that is a different question.

Sri C. J. MUCKANNAPPA.—In view of the difficulties experienced by the people of Tiptur, do the Government consider to see that the transformer is supplied as quickly as possible ?

Sri H. K. VEERANNA GOWDH.—I agree. Here it is said 'as early possible.'

ಶ್ರೀ ಕೆ. ಪುಟ್ಟಸ್ವಾಮಿ.—2 ವರ್ಷಗಳ ಕಾಲ ಟಾನ್ಸ್‌ಫಾರ್ಮರ್ ರಿಪೇರಿ ಆಗದೇ ಇತ್ತಲ್ಲಾ ಆ ಒಂದು ಕಾಲದಲ್ಲಿ ಅಲ್ಲಿಗೆ ಹೊಸ ಟಾನ್ಸ್‌ಫಾರ್ಮರ್ ಕೊಡುವುದಕ್ಕೆ ಏನಾದರೂ ಪ್ರಯತ್ನ ಇತ್ತೇ ?

Sri M. N. NAGHNOOR.—The transformer was supplied, but the load weight to be borne by Tiptur Sub-Division was trasnfe red to Holenarasipur sub-division and Government has done its best to see that the public was not inconvenienced.

Sri K. PUTTASWAMY.—Am I to understand that even though the transformer could not be repaired within the time the public were not inconvenienced and the new demands of the public were also met ?

Sri M. N. NAGHNOOR.—The information before me is that the public were not at all inconvenienced because the load of Tiptur Sub-Division was borne by Holenarsipur Sub-Division for the time being.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಪಬ್ಲಿಕ್‌ಗೆ ತೊಂದರೆ ಆಗಿಲ್ಲ ಎಂದು ಹೇಳುತ್ತೀರಿ. ನಾನು ಅಲ್ಲಿಯ ರೆಪ್ರಸೆಂಟೇಟೀವ್. ಈ ಪ್ರಶ್ನೆಗೆ ಹಾಕಬೇಕಾದರೆ ಅದಕ್ಕೇನೂ ಬೆಲೆ ಇಲ್ಲ ಎಂದು ಅರ್ಥವೇ ?

ಅಧ್ಯಕ್ಷರು.—ಪ್ರಶ್ನೆ ಕೇಳಿ ನೀವು ಹಾಗೆನ್ನಾ ಕಾಂಟರ್ ಆರ್ಗ್ಯುಮೆಂಟ್ ಮಾಡಬೇಡಿ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕಾಮಪ್ಲಪಕ್ಷ 20 ಸಾವಿರ ಕ್ಯಾಟ್ ಹೊಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಎನ್. ನಾಗನೂರ್.—ಇನ್ನೂವರೆಗೂ ಅಂಥ ಯಾವ ವರ್ತಮಾನವೂ ನಮಗೆ ಬಂದಿಲ್ಲ.

SURVEY REGARDING RURAL COMMUNICATION ROADS IN THE STATE

*Q.—761. Sri M. M. PATEEL.—(Hadagalli)

Will the Government be pleased to state :—

(*a*) whether any survey has been made by the Government regarding Rural Communication Roads in the State ;

(*b*) if so, the number of villages in Bellary District which are not still provided with roads (Taluk-wise information may be furnished) ?

A.—M. N. NAGHNOOR (Deputy Minister for Public Works).—

(*a*) No.

(*b*) The number of villages not yet served by Rural Communication :—

Name of Taluk		*No. of Villages*
Bellary	...	39
Siruguppa	...	69
Hospet	...	31
Sandur	...	93
Hadagalli	...	57
Harapanahalli	...	120
Mallapur	...	19
Total	...	428

ಶ್ರೀ ಎಂ. ಎಂ. ಪಾಟೀರ್.—(ಬ)ಗೆ ಉತ್ತರ ಹೇಳಿರುವುದರಲ್ಲಿ ಕೂಡ್ಲಿಗಿ ತಾಲ್ಲೂಕ್ ಬಿಟ್ಟು ಹೋಗಿದೆ. ಕೂಡ್ಲಿಗಿ ತಾಲ್ಲೂಕಿನಲ್ಲಿ ಎಲ್ಲಾ ಗ್ರಾಮಗಳಿಗೂ ರಸ್ತೆ ಆಗಿದೆ ಎಂದು ತಿಳಿದು ಕೊಳ್ಳಬೇಕೆ?

†ಶ್ರೀ ಎಂ. ಎನ್. ನಾಗನೂರ್.—ಹಾಗೇನೂ ಇಲ್ಲ. ಅಲ್ಲೂ ಕೂಡ ಕೆಲಸ ನಡೆದಿದೆ. ಸುಮಾರು 31 ಮೈಲು ಅಲ್ಲಿ tackle ಮಾಡಿದ್ದೇವೆ. ಈಗಾಗಲೇ 20 ಮೈಲು ರಸ್ತೆ ಮಾಡಲಾಗಿದೆ.

ಶ್ರೀ ಎಂ. ಎಂ. ಪಾಟೀರ್.—(ಎ)ಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ. ವಿಶೇಷವಾಗಿ ಈ ಹಳ್ಳಿಗಳಲ್ಲಿ ರಸ್ತೆ ಸಾಕಷ್ಟಿಲ್ಲದೆ ಅಲ್ಲಿಂದ ಪದಾರ್ಥಗಳನ್ನು ಸಾಗಿಸಲಿಕ್ಕೆ ಹೆಚ್ಚಿನ ಖರ್ಚು ಬಂದು ಆರ್ಥಿಕ ಮಟ್ಟಕ್ಕೆ ತೊಂದರೆಯಾಗಿದೆ. ಇದನ್ನು ಪರಿಹಾರ ಮಾಡಲು ಈಗ ಆದರೂ ಸರ್ಕಾರದವರು ಒಂದು ಯೋಜನೆ ಹಾಕಿಕೊಳ್ಳುತ್ತೀರಾ ?

ಶ್ರೀ ಎಂ. ಎನ್. ನಾಗನೂರ್.—ಮಾನ್ಯ ಸದಸ್ಯರು ಇಡೀ ನಮ್ಮ ರಾಜ್ಯದ ಸರ್ವೇ ಆಗಿದೆಯೇ ಎಂದು ಕೇಳಿದ್ದಾರೆ. ಅದಕ್ಕೆ 'ಇಲ್ಲ' ಎಂದು ಹೇಳಿದ್ದೇವೆ. ಈಗಾಗಲೇ ಸರಕಾರದವರು ಮಾಡಬೇಕಾದನ್ನು ಮಾಡುತ್ತಾ ಇದ್ದಾರೆ. ಪ್ರತಿ ತಾಲ್ಲೂಕಿನಲ್ಲೂ 50 ಮೈಲು ಮಾಡಬೇಕೆಂದು ಯೋಜನೆ ಇತ್ತು. ಈಗಾಗಲೇ ಇದನ್ನು ಕಾರ್ಯಗತ ಮಾಡುತ್ತಾ ಇದ್ದೇವೆ. ಬಳ್ಳಾರಿ ಜಿಲ್ಲೆಯಲ್ಲಿ ಹೇಳಬೇಕಾದರೆ, ಒಂದು ದೊಡ್ಡ ಪಟ್ಟಿ ಇದೆ. ಬೇಕಾದರೆ ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

ಶ್ರೀ ಎಂ. ಎಂ. ಪಾಟೀರ್.—ದಯವಿಟ್ಟು ಆ ಪಟ್ಟಿಯನ್ನು ಮಾನ್ಯ ಸಭೆಗೆ ಒಪ್ಪಿಸಬಹುದಾಗುತ್ತದೆಯೋ ?

†Sri H. K. VEERANNA GOWDH.—Yes, it may be placed on the Table of the House.

Sri M. Y. GHORPADE.—Has the Government sent any instructions to hold up the present programme of rural communications and if so, when will they send instructions to start executing the programmes ?

Sri M. N. NAGHNOOR.—Government has not instructed anybody to hold up programmes, but they have been instructed to say that wherever we have done 50 miles of road, we may stop at that and bring them to safety.

Sri M. Y. GHORPADE.—What is the position regarding Bellary District ?

Sri M. N. NAGHNOOR.—As I mentioned, in Bellary District alone we have tackled 170 miles and completed 100 miles by now.

Sri M. Y. GHORPADE.—Is it not a fact that they are not undertaking any further executions of rural communications in Bellary District?

Sri H. K. VEERANNA GOWDA.—If there is no 50 miles of road made in any taluk, in that taluk further work will be taken up. If 50 miles quota is made, no further work will be taken up. That has been answered.

ಶ್ರೀ ಬಿ. ಇ. ರಾಮಯ್ಯ.—ತಮ್ಮ ಉತ್ತರದ ಪ್ರಕಾರ 428 ಹಳ್ಳಿಗಳಲ್ಲಿ ರಸ್ತೆ ಇಲ್ಲ ಎಂದು ಹೇಳಿದ್ದೀರಿ. ಎಷ್ಟು ವರ್ಷದೊಳಗೆ ರಸ್ತೆ ಮಾಡಿನಬೇಕೆಂದು ಇದ್ದೀರಿ ?

ಶ್ರೀ ಎಂ. ಎನ್. ನಾಗನೂರ್.—ಸರ್ಕಾರದವರಿಗೆ ಸಾಕಾದಷ್ಟು ದುಡ್ಡು ಒದಗಿದಾಗ ಅದಷ್ಟು ಬೇಗ ತೆಗೆದುಕೊಂಡು ಮಾಡುತ್ತೇವೆ.

ಶ್ರೀ ಬಿ. ಇ. ರಾಮಯ್ಯ.—ಒಂದು ಗ್ರಾಮ ಅಭಿವೃದ್ಧಿಗೆ ಬರಬೇಕಾದರೆ ರಸ್ತೆ ಇಲ್ಲದೆ ಅಭಿವೃದ್ಧಿಗೆ ಬರಲು ಶಕ್ಯವಿಲ್ಲ ಎಂಬುದು ಸರ್ಕಾರದವರಿಗೆ ತಿಳಿದಿದೆಯೆ ?

ಶ್ರೀ ಎಂ. ಎನ್. ನಾಗನೂರ್.—ಈಗಾಗಲೇ ತಾಲ್ಲೂಕು ಬೋರ್ಡ್‌ಗಳು ಅಸ್ತಿತ್ವಕ್ಕೆ ಬಂದಿವೆ. ಅವರು ಪ್ರಯತ್ನ ಮಾಡಿದರೆ ಜಾಗ್ರತೆ ಮಾಡಿನಲು ಸಾಧ್ಯವಾಗಬಹುದು.

Sri. R. NAGAN GOWDA.—May I know how many miles have been covered in malapur Taluk, whether they have exceeded 50 mile limit ; if not, will they take up the work ?

Sri H. K. VEERANNA GOWDA.—In Mallapur taluk only 6 or 7 miles of road was taken up and the remaining quota of 40 and odd miles will be taken up.

Sri M. Y. GHORPADE.—Is there any taluk in Bellary District where 50 miles of road is completed ?

Sri H. K. VEERANNA GOWDA.—No, not yet.

ಶ್ರೀ ಎಂ. ಎಂ. ಪಾಟೀಲ್.—ಈಗ ತಾನೆ ಮಾನ್ಯ ಮಂತ್ರಿಗಳು 'not yet' ಎಂದು ಅಷ್ಟಣೆ ಕೊಡಿಸಿದರು. 50 ಮೈಲಿ ರಸ್ತೆ ಆದರೂ ಪೂರ್ಣವಾಗಿ ಮಾಡಿನಲು ಎಕ್ಸಿಕ್ಯೂಟೀವ್ ಇಂಜಿನಿಯರಿಗೆ ಆರ್ಡರ್ ಕೊಡುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆರ್ಡರ್ ಆಗಲೇ ಇಷ್ಟು ಮಾಡಿದ್ದಾರೆ ಯಾವುದಾದರೂ ಕಾರಣದಿಂದ ನಿಧಾನವಾಗಿರಬಹುದು. ಈಗ ಬಹುಶಃ ಮಳೆ ದೆಶೆಯಿಂದ ನಿಧಾನವಾಗಿದ್ದರೂ ಆಗಿರಬಹುದು. 50 ಮೈಲಿ ರಸ್ತೆ ತೆಗೆದುಕೊಂಡು ಮಾಡಿನಬೇಕೆಂದೂ ಎಲ್ಲರಿಗೂ ಹೇಳಿದೆ.

ಶ್ರೀ ಎಂ. ಎಂ. ಪಾಟೀಲ್.—ರೇಚೆಸ್ ನರ್ಕ್ಯುಲರ್ ಪ್ರಕಾರ ಯಾವುದು ರಸ್ತೆ ತೆಗೆದು ಕೊಳ್ಳಬಾರದು. ಅದ್ದರಿಂದ ನಿಂತು ಹೋಗಿದೆ ಎಂದು ಎಕ್ಸಿಕ್ಯುಟೀವ್ ಇಂಜಿನಿಯರ್ ಹೇಳುತ್ತಾ ಇದ್ದಾರೆ. ಅದು ನಿಜವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇಲ್ಲಿ ಅದನ್ನು ಅವರು ಸರಿಯಾಗಿ ತಿಳಿದುಕೊಳ್ಳಲಿಲ್ಲವೋ ಅಥವಾ ನೀವು ಬೇರೆಯಾಗಿ ಇಲ್ಲಿ ಹೇಳುತ್ತಾ ಇದ್ದೀರೋ ಗೊತ್ತಿಲ್ಲ. 50 ಮೈಲಿಗಿಂತ ಹೆಚ್ಚಾಗಿ ಇದ್ದರೆ ಹಾಗೆ ಹೇಳಿರಬಹುದು. 50 ಮೈಲಿ ಒಳಗೆ ಇದ್ದರೆ ತೆಗೆದುಕೊಳ್ಳಬೇಕೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ.